# ‘ಕಲಾವಿದರಲ್ಲಿಯೇ ತಾರತಮ್ಯ ತರವೇ?

**ಅಭಿಜ್ಞಾ ಭಟ್**
**ಸ್ಟಾರ್‌ಸುವರ್ಣದ ‘ಆಸೆ’ ರೋಹಿಣಿ**

■ ರಾಘವೇಂದ್ರ ಕೆ.

◆ **ನಟನೆಯನ್ನು ಎದುರುಗೊಂಡ ಸಂದರ್ಭ ಹೇಗಿತ್ತು?**

ನಟನೆಯನ್ನು ಆರಂಭಿಸಿ ನಾಲ್ಕು ವರ್ಷಗಳಾಯಿತು. ಅದಕ್ಕೂ ಮುಂಚೆ ರಿಯಾಲಿಟಿ ಶೋನಲ್ಲಿ ಇದ್ದೆ. ‘ಪ್ಯಾಟೆ ಹುಡುಗಿಯರ ಹಳ್ಳಿ ಲೈಫ್’ ಮೂಲಕ ಕಿರುತೆರೆಯ ಪರಿಚಯ ಆಯಿತು. ಅದರ ಜೊತೆ ಓದನ್ನೂ ಮುಂದುವರಿಸಿದೆ. ಸ್ವಲ್ಪ ದಿನ ಡಬ್ಬಿಂಗ್ ಕಲಾವಿದೆಯಾಗಿ ಕೆಲಸ ಮಾಡಿದೆ. ‘ನಿಹಾರಿಕಾ’ದಲ್ಲಿ ಚಿಕ್ಕ ಪಾತ್ರದೊಂದಿಗೆ ಅಭಿನಯ ಆರಂಭಿಸಿದೆ. ನಂತರ ‘ರಾಮಾಚಾರಿ’, ‘ಗೌರಿ ಶಂಕರ’ ಹೀಗೆ ಸಾಗುತ್ತಿದೆ.

◆ **ರಿಯಾಲಿಟಿ ಶೋ ಸ್ಪರ್ಧೆ ಮತ್ತು ಅಭಿನಯದಲ್ಲಿ ಕ್ಯಾಮೆರಾ ಹೇಗೆ ಕೆಲಸ ಮಾಡುತ್ತದೆ?**

ರಿಯಾಲಿಟಿ ಶೋ ಸಾಹಸದ ಕ್ರಿಯೆ. ಅದರಲ್ಲಿ ರಿಯಲ್ ಜೀವನದಂತೆ ಅಭಿಜ್ಞಾ ಆಗಿರುತ್ತಿದ್ದೆ. ಈಗ ಧಾರಾವಾಹಿಯಲ್ಲಿ ರೋಹಿಣಿಯಾಗಿದ್ದೇನೆ. ಅಂದರೆ ಮತ್ತೊಂದು ಪಾತ್ರದಲ್ಲಿ ಜೀವಿಸುತ್ತಿದ್ದೇನೆ. ಅಭಿಜ್ಞಾ ಆಗಿ ಬೇರೆ ಪಾತ್ರ ನಿರ್ವಹಿಸುವುದು ಬೇರೆ ಅನುಭವ ನೀಡುತ್ತದೆ. ತಾಯ್ತನದ ಈ ಪಾತ್ರ ಮಗುವನ್ನು ಪೋಷಿಸಬೇಕಿದೆ. ಅವಳ ಗಂಡ ತೀರಿಕೊಂಡಿದ್ದಾರೆ. ಹದಿನಾರು ವರ್ಷಕ್ಕೆ ಮದುವೆ ಆಗಿದೆ. ವಾಸ್ತವದಲ್ಲಿ ನನಗೆ ಇನ್ನೂ ಮದುವೆ ಆಗಿಲ್ಲ. ಆದರೆ ಒಬ್ಬ ತಾಯಿಯಾಗಿ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವೆ.

◆ **ರೋಹಿಣಿ ಪಾತ್ರದ ಸವಾಲುಗಳು ಏನಿದ್ದವು?**

ಈ ಪಾತ್ರಕ್ಕೆ ನಾನು ರಿಪ್ಲೇಸ್ ಆಗಿದ್ದೇನೆ. ಒಬ್ಬರು ಒಂದು ಪಾತ್ರಕ್ಕೆ ಜೀವ ತುಂಬಿರುತ್ತಾರೆ. ಅದನ್ನು ಮತ್ತೊಬ್ಬರು ತಮ್ಮದಾಗಿಸಿಕೊಳ್ಳಬೇಕು ಎಂದರೆ ಸಣ್ಣ ಅಳುಕು ಇದ್ದೇ ಇರುತ್ತದೆ. ಏಕೆಂದರೆ, ಪಾತ್ರದ ಬಗ್ಗೆ ವೀಕ್ಷಕರಲ್ಲಿ ಒಂದು ಚಿತ್ರ ಮೂಡಿರುತ್ತದೆ. ಅದನ್ನು ಮೀರುವ ಮತ್ತು ಅವರ ಕಲ್ಪನೆಗೆ ಧಕ್ಕೆ ಆಗದಂತೆ ಪಾತ್ರವನ್ನು ಹೊಸಬರು ಮುನ್ನಡೆಸಬೇಕಾಗುತ್ತದೆ. ಆರಂಭದಲ್ಲಿ ಕಾಡಿದ ಬಹುದೊಡ್ಡ ಸಮಸ್ಯೆ ಇದಾಗಿತ್ತು. ರೋಹಿಣಿಯಾದ ನನ್ನನ್ನು ವೀಕ್ಷಕರು ಬೇಗ ಒಪ್ಪಿಕೊಂಡರು. ಅದು ನನಗೆ ಮಾತ್ರವಲ್ಲದೆ, ನಮ್ಮ ತಂಡಕ್ಕೂ ಸಮಾಧಾನವನ್ನು ತಂದಿದೆ. ವಯಸ್ಸಿನಲ್ಲಿ ದೊಡ್ಡ ಪಾತ್ರವನ್ನು ಒಪ್ಪಿಕೊಂಡಿದ್ದೇನೆ. ಪಾತ್ರದ ಅನುಭವವೂ ಅಷ್ಟೇ. ಜೀವನದಲ್ಲಿ ಬರೀ ಕಷ್ಟ ಎದುರಿಸುತ್ತಿದ್ದ ರೋಹಿಣಿಗೆ ಎಲ್ಲೆಡೆಯಿಂದ ವಂಚನೆ ಆಗುತ್ತದೆ. ಬಹುತೇಕ ಹೆಣ್ಣುಮಕ್ಕಳು ಒಳ್ಳೆಯ ಗಂಡ ಮತ್ತು ಉತ್ತಮ ಕುಟುಂಬವನ್ನು ನಿರೀಕ್ಷೆ ಮಾಡುತ್ತಾರೆ.



ಒಂದು ಮಗುವಿನ ತಾಯಿ ರೋಹಿಣಿ ಏನೋ ಒಂದು ಸುಳ್ಳು ಹೇಳುತ್ತಾಳೆ. ಅದನ್ನು ಮುಚ್ಚಿಡಲು ಮತ್ತೊಂದು ಸುಳ್ಳು ಹೇಳಬೇಕಾಗುತ್ತದೆ. ಅವಳಿಗೆ ಸುಂದರ ಜೀವನ ಬೇಕಾಗಿರುತ್ತದೆ. ಇಂತಹ ವ್ಯಕ್ತಿತ್ವಗಳು ವಾಸ್ತವದ ಜಗತ್ತಿನಲ್ಲಿ ಸಾಕಷ್ಟು ಇವೆ. ನನ್ನ ಅಮ್ಮನ ನೋಡಿ ಈ ಪಾತ್ರವನ್ನು ಮಾಡುತ್ತಿದ್ದೇನೆ. ಇದಕ್ಕಾಗಿ ಅನೇಕ ಸಿನಿಮಾಗಳನ್ನು ನೋಡಿ, ತಾಯಿಯ ಮಮತೆಯನ್ನು ಅರ್ಥ ಮಾಡಿಕೊಂಡಿದ್ದೇನೆ. ಈ ಪಾತ್ರಕ್ಕೆ ಅನೇಕ ಏರಿಳಿತಗಳು ಇವೆ. ಸಮಾಜದಲ್ಲಿ ಶೋಷಣೆಗೆ ಒಳಗಾದ ಹೆಣ್ಣು ತನ್ನ ಮಗುವಿಗೆ ಉತ್ತಮ ಜೀವನ ಕಟ್ಟಿಕೊಡಬೇಕು ಎನ್ನುವ ಹೋರಾಟದಲ್ಲಿ ಇದ್ದಾಳೆ. ದುಡ್ಡೇ ಪ್ರಧಾನವೇ ಎನ್ನುವುದು ಅವಳ ಅನುಭವಕ್ಕೆ ಬಂದಿದೆ.

◆ **ವೃತ್ತಿ ಬದುಕಿನ ಮುಂದಿನ ದಿನಗಳ ಬಗ್ಗೆ ಏನು ಯೋಚನೆ ಮಾಡಿದ್ದೀರಿ?**

ಇವತ್ತು ಹೇಗೆ ಇದ್ದೇನೆ, ಏನು ಮಾಡುತ್ತಿದ್ದೇನೆ ಎನ್ನುವುದಷ್ಟೇ ವಾಸ್ತವ. ಇಂತಹ ಪಾತ್ರ ಬೇಕು ಎಂಬ ಬೇಡಿಕೆ ಇಲ್ಲ. ಉಮಾಶ್ರೀ ಅವರ ಸಿನಿಮಾಗಳನ್ನು ಹೆಚ್ಚು ನೋಡಿದ್ದೇನೆ. ಅವರಂತೆ ಭಿನ್ನ ಪಾತ್ರಗಳನ್ನು ಮಾಡಬೇಕು ಎನ್ನುವ ಆಸೆ ಇದೆ. ಒಂದೇ ರೀತಿಯ ಪಾತ್ರಗಳು ಮಾಡುವುದು ಖುಷಿಕೊಡುವುದಿಲ್ಲ. ಪಾಸಿಟಿವ್–ನೆಗೆಟಿವ್ ಪಾತ್ರಗಳು ಎನ್ನುವ ಭೇದ ಇಲ್ಲದಂತೆ ಮಾಡಬೇಕು. ಎಲ್ಲದಕ್ಕೂ ಮುಖ್ಯವಾಗಿ ಜೀವನ ಹೇಗೆ ಬರುತ್ತೋ ಹಾಗೆ ಸಾಗಬೇಕು ಎನ್ನುವುದು ಸದ್ಯದ ಮನೋಸ್ಥಿತಿ.

◆ **ನಿಮ್ಮ ಕಿರುತೆರೆ ಅನುಭವ ಹೇಗಿದೆ?**

ನಮ್ಮ ಕುಟುಂಬದ ಸುತ್ತಮುತ್ತ ಎಂಜಿನಿಯರ್, ಡಾಕ್ಟರ್, ಓದಿದವರು ಹೆಚ್ಚು. ನಟಿ ಆಗುತ್ತೇನೆ ಎನ್ನುವ ನಿರ್ಧಾರ ತೆಗೆದುಕೊಂಡಾಗ ಬಹುತೇಕರಿಗೆ ಗೊಂದಲ ಹುಟ್ಟಿತ್ತು. ನಮ್ಮ ತಾಯಿ–ತಂದೆ ಕೂಡ ಅಚ್ಚರಿ ವ್ಯಕ್ತಪಡಿಸಿದರು. ಅವರಿಗೆ ಏನೇ ಮಾಡಿದರೂ ಓದನ್ನು ನಿಲ್ಲಿಸುವುದಿಲ್ಲ ಎಂದು ಹೇಳಿದೆ. ಹದಿಹರೆಯದಲ್ಲೇ ಈ ಕ್ಷೇತ್ರಕ್ಕೆ ಬಂದಿದ್ದರೂ ಓದನ್ನು ನಿಲ್ಲಿಸಿಲ್ಲ. ಎಂಬಿಎ ಮುಗಿಸಿ ಈಗ ಲಾ ಮಾಡುತ್ತಿದ್ದೇನೆ. ನಮ್ಮ ಪೋಷಕರು ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ. ನನ್ನ ಬೆಳವಣಿಗೆ ಅವರಿಗೂ ಖುಷಿ ಕೊಟ್ಟಿದೆ. ಸಂಬಂಧಿಕರು ಇದೆಲ್ಲ ಯಾಕೆ ಬೇಕು ಎನ್ನುವ ಮಾತುಗಳನ್ನು ಹೇಳಿದ್ದರು.

ಇಲ್ಲಿ ಆರಂಭದಲ್ಲಿ ಸಿಗುತ್ತಿದ್ದ ಮನ್ನಣೆಗೂ ಬೆಳೆದ ನಂತರ ಸಿಗುತ್ತಿರುವ ಗೌರವಕ್ಕೂ ವ್ಯತ್ಯಾಸ ಇದೆ. ಒಂದು ಕಾಲದಲ್ಲಿ ಕೊನೆಗಣ್ಣಿನಿಂದ ನೋಡಿದವರೆ ಈಗ ಖುದ್ದು ಬಂದು ಮಾತನಾಡಿಸುವ ಮಟ್ಟಿಗೆ ಬೆಳೆದಿದ್ದೇನೆ. ಆ ವ್ಯತ್ಯಾಸ ನನಗೆ ಗೊತ್ತಾಗಿದೆ. ಅದೆಲ್ಲ ನೋಡಿದಾಗ ಇಲ್ಲೇನೋ ಮಾಡಿದ್ದೇನೆ ಎಂದು ಅನ್ನಿಸಿದೆ. ಆದರೆ ನಾಯಕಿ ಸಹನಟಿಗೆ ತಾರತಮ್ಯ ಮಾಡಬಾರದು. ನಾವೆಲ್ಲರೂ ಮನುಷ್ಯರು ಅಂದ ಮೇಲೆ ಎಲ್ಲರನ್ನೂ ಒಂದೇ ರೀತಿ ನೋಡಬೇಕು. ನಾನು ಬದುಕನ್ನು ನೋಡುವ ಕ್ರಮ ಹೀಗಿದೆ. ಇವತ್ತು ಚಿಕ್ಕ ಪಾತ್ರ ಮಾಡುತ್ತಿದ್ದವರು ನಾಳೆ ಸೂಪರ್ ಸ್ಟಾರ್ ಆಗಬಹುದು. ■